


# ಗಿನ್ನಿಸ್ ದಾಖಲೆಯ ಉಗುರು!

ಹವ್ಯಾಸಗಳಲ್ಲಿ ನೂರೆಂಟು ವೈವಿಧ್ಯ. ಎಲ್ಲವೂ ಒಂದಕ್ಕಿಂತ ಒಂದು ವಿಭಿನ್ನ. ಉಗುರು ಬೆಳೆಸುವುದು ಕೂಡ ಒಂದು ಕಲೆ. ಉಗುರಿನಲ್ಲಿ ಹಲವು ವೈವಿಧ್ಯಗಳನ್ನು ಮಾಡಿ ಎಲ್ಲರಿಗಿಂತ ವಿಶಿಷ್ಟವಾಗಿ ಗಮನಸೆಳೆಯಬೇಕೆಂಬ ಹಂಬಲವೂ ಹಲವರಿಗೆ. ಇನ್ನೂಕೆಲವರಿಗೆ ಏನಾದರೂ ಸಾಧನೆ ಮಾಡಿ ಗಿನ್ನಿಸ್ ದಾಖಲೆ ಮಾಡುವ ಬಯಕೆ.

ಅಮೆರಿಕದ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿರುವ ಅಯನ್ನಾ ವಿಲಿಯಮ್ಸ್ ಅತ್ಯಂತ ಉದ್ದದ ಉಗುರು ಬೆಳೆಸಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಒಂದೊಂದು ಬೆರಳಿನ ಉಗುರು ಕೂಡ ಎರಡು ಅಡಿಗಳಷ್ಟು ಉದ್ದವಿದೆ. ಇದನ್ನು ಬೆಳೆಸುವುದಕ್ಕಾಗಿ ಅಯಾನ್ ಬರೋಬ್ಬರಿ 23 ವರ್ಷಗಳನ್ನು ತೆಗೆದುಕೊಂಡಿದ್ದಾರೆ.



ಸ್ವತಃ ಕಲಾವಿದೆಯೂ ಆಗಿರುವ ಅಯಾನ್ ವಿಲಿಯಮ್ಸ್, ಒಂದೊಂದು ಉಗುರಿಗೂ ಒಂದೊಂದು ರೀತಿಯ ವಿನ್ಯಾಸ ಮಾಡಿಕೊಂಡಿದ್ದಾರೆ. ಉಗುರುಗಳ ಮೇಲೆ ಪೈಂಟಿಂಗ್ ಮೂಲಕ ಕುಸುರಿ ಕಲೆಯನ್ನೂ ಮಾಡಿರುವುದು ಅಯಾನ್ ಸ್ಪೆಷಾಲಿಟಿ. ಉಗುರುಗಳಿಗೆ ಪೈಂಟ್ ಮಾಡಿಕೊಳ್ಳಲು ಅಯಾನ್‌ಗೆ ಒಂದು ವಾರ ಕಾಲ ಹಿಡಿಯಿತಂತೆ. ಉಗುರುಗಳನ್ನು ಸ್ವಚ್ಛಗೊಳಿಸಲು ಅಯಾನ್ ಬ್ರಷ್ ಮತ್ತು ಆ್ಯಂಟಿ ಬ್ಯಾಕ್ಟೀರಿಯಲ್ ಸೋಪ್ ಬಳಸುತ್ತಾರೆ. ಅಲ್ಲದೆ ಉಗುರುಗಳು ತುಂಡಾಗದಂತೆ ಎಚ್ಚರ ವಹಿಸಲು ಹಾರ್ಡನರ್ ಮತ್ತು ಅಕ್ರಿಲಿಕ್ ಅನ್ನು ಬಳಸುತ್ತಾರಂತೆ.

‘ಅತ್ಯಂತ ಉದ್ದದ ಉಗುರುಗಳ ನಿರ್ವಹಣೆ ಬಹಳ ಕಷ್ಟ’ ಎನ್ನುವ ಅಯಾನ್, ಇದಕ್ಕೆ ತಾಳ್ಮೆ, ಧೈರ್ಯ, ಶ್ರದ್ಧೆ ಎಲ್ಲವೂ ಬೇಕು’ ಎನ್ನುತ್ತಾರೆ. ಈಗ ಅಯಾನ್ ಉಗುರುಗಳನ್ನು ನೋಡಲು ನಿತ್ಯವೂ ನೂರಾರು ಮಂದಿ ಆಕೆಯ ಸುತ್ತ ನೆರೆಯುತ್ತಾರಂತೆ.!

■ ಯು. ವೇಣೂರು